(ಉ) ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಗುಡಿಸಲುಗಳ ನೆಲಸಮ.

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಸನ್ಮಾನ್ಯ ಸಭಾಧ್ಯಕ್ಷರೆ, ಹದಿನೇಳನೇ ತಾರೀಖು ಬಜೆಟ್ ಮಂಡನೆಯ ದಿನ, ನಾನು ಅಧಿವೇಶನದಲ್ಲಿ ಭಾಗವಹಿಸುವಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಸುಮಾರು ನೂರ ಐವತ್ತು ಗುಡಿಸಲುಗಳನ್ನು ಅಲ್ಲಿ ಮೈಸೂರು ಮಹಾನಗರಪಾಲಿಕೆ ಒಡೆದು ನೆಲಸಮ ಮಾಡಿದ್ದಾರೆ. ಇವತ್ತು ಆ ಬಡಜನ, ಯಾವುದೇ ಆಶ್ರಯವಿಲ್ಲದೆ, ಊಟವಿಲ್ಲದೆ, ಯಾವುದೇ ಪರಿಸ್ಥಿತಿಯಲ್ಲಿ ಅವರಿಗೊಂದು ಆಶ್ರಯ ಸಿಗದೆ, ಇವತ್ತು ಮಹಾನಗರಪಾಲಿಕೆಯ ಮುಂದೆ ಮೂರು ದಿವಸಗಳಿಂದ ಧರಣಿಯನ್ನು ಮಾಡುತ್ತಿದ್ದಾರೆ. ನಾನು ಕಳೆದ ಎರಡು ದಿವಸಗಳ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದಾಗ, ಸಂಬಂಧಪಟ್ಟ ಸಚಿವರು ಇಲ್ಲಿ ಇರಲಿಲ್ಲ. ಇದೇ ರೀತಿಯಾದ ಒಂದು ಗುಡಿಸಲುಗಳನ್ನು ನಗರಾಭಿವೃದ್ಧಿ ಪ್ರಾಧಿಕಾರದ ನಾಲ್ಕು ಎಕರೆ ಭೂಮಿಯಲ್ಲಿ ಆಡಳಿತದಲ್ಲಿರುವ ಮಹಾನಗರಪಾಲಿಕೆಯ ಸದಸ್ಯರು ನಿರ್ಮಾಣಮಾಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ, ಎಲ್ಲಾ ರೀತಿಯಾದ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಅವರಿಗೆ ಈ ರೀತಿ ಎಲ್ಲಾ ರೀತಿಯ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಟ್ಟಂತಹ ಮಹಾನಗರಪಾಲಿಕೆಯವರು ಈ ನೂರ ಐವತ್ತು ಗುಡಿಸಲುಗಳನ್ನು ಏಕಾಏಕಿಯಾಗಿ ಒಡೆದುಹಾಕಿ, ಅವರನ್ನು ನಿರಾಶ್ರಿತರನ್ನಾಗಿ ಮಾಡಿರುವ ಒಂದು ಸಂದರ್ಭದಲ್ಲಿ ಸರ್ಕಾರ ಅವರಿಗೆ ಏನು ಆಶ್ರಯ ಕೊಡುವ ವ್ಯವಸ್ಥೆ ಮಾಡುತ್ತದೆ, ಇವತ್ತು ಅವರು ಬೀದಿಯಲ್ಲಿದ್ದಾರೆ, ಈ ವಿಚಾರವನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :— ಮಾನ್ಯ ಸಭಾಧ್ಯಕ್ಷರೆ ಹೌಸಿಂಗ್ ಬೋರ್ಡಿನವರದು 18 ಎಕರೆ ಭೂಮಿ ಏನಿದೆ ಅದರಲ್ಲಿ ಎಂಐಜಿ ಹೌಸಸ್ 69, ಎಲ್‌ಐಜಿ 128, ಇಡಬ್ಲ್ಯೂಎಸ್ 215, ಈ ಎಲ್ಲಾ ಹೌಸಿಂಗ್‌ಗಳನ್ನು ನಿರ್ಮಿಸಿ ದಿನಾಂಕ 3-10-1996ರಲ್ಲಿ ಹೌಸಿಂಗ್ ಬೋರ್ಡಿನವರು ಮಹಾನಗರಪಾಲಿಕೆಯವರಿಗೆ ಹಸ್ತಾಂತರ ಮಾಡಿದರು. ಈಗ ಅಲ್ಲಿ, ಗಾರ್ಡನ್ ಹಾಗೂ ಮಕ್ಕಳು ಆಟವಾಡಲು ಇರುವ ಜಾಗ ಏನಿದೆ, ಅಲ್ಲಿ ನೂರ ಐವತ್ತು ಗುಡಿಸಲುಗಳನ್ನು ಅಕ್ರಮವಾಗಿ ಹಾಕಿಕೊಂಡಿದ್ದರು. ಈ ಘಟನೆ ಮಾರ್ಚ್ 13 ಹಾಗೂ 14ನೇ ತಾರೀಖಿನಂದು ನಡೆದದ್ದು. ದಿನಾಂಕ 17-3-1999ಕ್ಕೆ ಕಾರ್ಪೋರೇಷನ್ ನೋಟಿಸ್ ಬಂದ ಮೇಲೆ ಪೋಲಿಸ್‌ನವರಿಗೆ ದೂರು ಸಲ್ಲಿಸಿ ಅಲ್ಲಿದ್ದ ಎಲ್ಲಾ ಗುಡಿಸಲುಗಳನ್ನು ತೆಗೆಸಿಬಿಟ್ಟರು. ಯಾರು ಬಡವರು ಇದ್ದಾರೆ ಅವರಿಗೆ ಬೇಕಾದರೆ ಆಶ್ರಯ ಯೋಜನೆಯಲ್ಲಿ ನಾನು ನಿವೇಶನವನ್ನು ಹಂಚಿಕೆ ಮಾಡಿಸಿಕೊಡುತ್ತೇನೆ. ಗುಡಿಸಲುಗಳಿದ್ದ ಜಾಗವೇನಿದೆ ಅದು ಸಂಪೂರ್ಣವಾಗಿ ಹೌಸಿಂಗ್ ಬೋರ್ಡ್‌ನಿಂದ ಮಹಾನಗರಪಾಲಿಕೆಯವರಿಗೆ ನೀಡಿದ ಜಾಗ, ಅದು ಗಾರ್ಡನ್ ಜಾಗ.